**ದಿನಾಂಕ: 27-12-2019 ರಂದು ಬೆಳಿಗ್ಗೆ 11.00 ಘಂಟೆಗೆ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ರವರ ಕಛೇರಿ ಸಭಾ ಭವನದಲ್ಲಿ ಸನ್ಮಾನ್ಯ ಶ್ರೀ ಅನಂತಕುಮಾರ ಹೆಗಡೆ, ಮಾನ್ಯ ಲೋಕಸಭಾ ಸದಸ್ಯರು ಉತ್ತರ ಕನ್ನಡ ಕ್ಷೇತ್ರ-12 ಹಾಗೂ ಉತ್ತರ ಕನ್ನಡ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ(ದಿಶಾ) ಸಮಿತಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಉತ್ತರ ಕನ್ನಡ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ(ದಿಶಾ) ಸಮಿತಿ ಸಭೆಯ ನಡುವಳಿಗಳು.**

ಪ್ರಾರಂಭದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉತ್ತರ ಕನ್ನಡ ಜಿಲ್ಲಾ ಪಂಚಾಯತ ಕಾರವಾರ ರವರು ಸಭೆಗೆ ಆಗಮಿಸಿದ ಸನ್ಮಾನ್ಯ ಶ್ರೀ ಅನಂತಕುಮಾರ ಹೆಗಡೆ, ಮಾನ್ಯ ಲೋಕಸಭಾ ಸದಸ್ಯರು ಉತ್ತರ ಕನ್ನಡ ಕ್ಷೇತ್ರ-12 ಹಾಗೂ ಅಧ್ಯಕ್ಷರು, ಉತ್ತರ ಕನ್ನಡ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ(ದಿಶಾ) ಸಮಿತಿ ಇವರಿಗೆ ಸ್ವಾಗತ ಕೋರಿದರು. ಅದರಂತೆ ಸಭೆಗೆ ಹಾಜರಿದ್ದ ಕಾರವಾರ-ಅಂಕೋಲಾ, ವಿಧಾನಸಭಾ ಸದಸ್ಯರಿಗೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳನ್ನು, ಅಧ್ಯಕ್ಷರು, ತಾಲೂಕ ಪಂಚಾಯತರವರುಗಳನ್ನು ಸ್ವಾಗತಿಸಿದರು. ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಪತ್ರಕರ್ತರನ್ನು ಸ್ವಾಗತಿಸಿ,ಇಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡುವಂತೆ ದಿಶಾ ಸಮಿತಿ ಅಧ್ಯಕ್ಷರು ಹಾಗೂ ಮಾನ್ಯ ಸಂಸದರಲ್ಲಿ ವಿನಂತಿಸಿಕೊಂಡರು.

ಮಾನ್ಯ ಸಂಸದರು ಅಧ್ಯಕ್ಷತೆಯನ್ನು ವಹಿಸಿಕೊಂಡು ಪ್ರಾರಂಭದಲ್ಲಿ ದಿನಾಂಕ: 19-01-2019 ರಂದು ಜರುಗಿದ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ(ದಿಶಾ) ಸಮಿತಿ ಸಭೆಯ ನಡವಳಿಗಳ ಮೇಲೆ ಸಂಬಂಧಿಸಿದ ಇಲಾಖೆಯವರ ಪಾಲನಾ ವರದಿಯನ್ನು ಪರಿಶೀಲನೆ ನಡೆಸಿದರು.

1) ವಸತಿ:

ಸಭೆಯಲ್ಲಿ ಪ್ರಧಾನ ಮಂತ್ರಿ ಅವಾಸ ಯೋಜನೆ (PMAY) ಯಡಿ ಪ್ರಗತಿ ವರದಿಯನ್ನು ಪರಿಶೀಲಿಸಿದ ಮಾನ್ಯ ಸಂಸದರು, ಹಿಂದಿನ ಸಭೆಯಲ್ಲಿ ಫಲಾನುಭವಿಗಳಿಗೆ ಮನೆ ಕಟ್ಟಿಕೊಡಲು ಜಾಗ ಗುರುತಿಸಲು ತಿಳಿಸಲಾಗಿತ್ತು, ಅದರ ವರದಿ ಸರಿಯಾಗಿ ಬಂದಿರುವುದಿಲ್ಲ. ಭಟ್ಕಳ,ಹೊನ್ನಾವರ ಕುಮಟಾ ತಾಲೂಕುಗಳಲ್ಲಿ ಜಾಗ ಕೊಡುವವರು ಇದ್ದರೆ ಅಲ್ಲಿ ಜಾಗ ಗುರುತಿಸಿ, ಅನುದಾನ ತರಲು ಯೋಜನೆ ತಯಾರಿಸಿ, ರಾಜ್ಯ ಸರಕಾರದಿಂದ ಅನುದಾನಕ್ಕೆ ಕೇಳಿಕೊಳ್ಳಬಹುದು ಎಂದು ತಿಳಿಸಿ, ಇದರ ಬಗ್ಗೆ ವಿಚಾರಿಸಿ, ಜನರ ಇಚ್ಛೆಯಂತೆ ಅಲ್ಲಿ ಜಾಗವನ್ನು ಗುರುತಿಸುವುದು, ಪ್ರವಾಹ ಬಂದ ಪ್ರದೇಶಗಳಲ್ಲಿ ಅದರ ಅಕ್ಕಪಕ್ಕದಲ್ಲಿಯೇ ಜಾಗ ಗುರುತಿಸುವ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಟೈಮ್‌ಲೈನ್ ನಿಗಧಿ ಮಾಡಲು ಹಾಗೂ 15 ಫೇಬ್ರವರಿ-2020 ರೊಳಗೆ ಕಾರ್ಯಯೋಜನೆ ಸಿದ್ದಪಡಿಸಿಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, ಸದರಿ ಯೋಜನೆಯ ಬಗ್ಗೆ ಜಿಲ್ಲಾಧಿಕಾರಿಗಳ ನೇತ್ರತ್ವದಲ್ಲಿ 12 ಎಕರೆ ಜಮೀನನ್ನು ಗುರುತಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ ದಾಂಡೇಲಿಯಲ್ಲಿ ಗುಂಪು ಮನೆಗಳಿಗೆ ಪ್ರಸ್ತಾವನೆ ತಯಾರಿಸುತ್ತಿರುವುದಾಗಿ ತಿಳಿಸಿ, ಒಂದು ಗುಂಟೆ ಜಾಗವನ್ನು ಅವರ ಹೆಸರಿಗೆ ಮಾಡಿಕೊಡುವಂತೆ ಅಲ್ಲಿನ ಜನರು ತಿಳಿಸುತ್ತಾರೆ. ಅಲ್ಲದೇ ಕದ್ರಾದಲ್ಲಿ ಮನೆ ನಿರ್ಮಾಣ ಮಾಡಲು ಜಾಗವನ್ನು ಗುರುತಿಸಿದ್ದು, ಅಲ್ಲಿ ಮನೆಗಳ ನಿರ್ಮಾಣಕ್ಕೆ ಪ್ರಸ್ತಾವನೆಯನ್ನು ಕಾರವಾರ ಉಪವಿಭಾಗಾಧಿಕಾರಿಗಳು ತಯಾರಿಸಿರುವುದಾಗಿ ಅವರು ತಿಳಿಸಿದರು. ಪ್ರವಾಹದಿಂದಾಗಿ ಮನೆ ಕಳೆದುಕೊಂಡವರಲ್ಲಿ ಅಲ್ಲಿಯೇ ವಾಸ ಇರುವವರಿಗೆ ರೂ. 5.00 ಲಕ್ಷ ಕೊಡುತ್ತಿದ್ದು, ಅಲ್ಲಿಂದ ಬೇರೆ ಕಡೆ ಹೋಗುವವರಿಗೂ ಜಾಗ ಕೊಡುವ ವ್ಯವಸ್ಥೆ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳು ಮಾನ್ಯ ಸಂಸದರ ಗಮನಕ್ಕೆ ತಂದರು.

ಕಾರವಾರ ಅಂಕೋಲಾ ವಿಧಾನ ಸಭಾ ಕ್ಷೇತ್ರ ಶಾಸಕಿಯವರು ಮಾತನಾಡಿ, ಸದರಿ ವಿಷಯದ ಬಗ್ಗೆ ಸಭೆ ನಡೆಸಿದ್ದು, ಅಲ್ಲಿನ ಜನರು ಒಂದು ಗುಂಟೆ ಜಾಗದಲ್ಲಿ ಮನೆ ಮಾಡಿಕೊಡಿ, ಒಂದರ ಮೇಲೆ ಒಂದು ಬೇಡ ಎಂದು ಹೇಳುತ್ತಾರೆ. ನಾನು ಕೂಡ ಸರಕಾರಿ ಜಾಗ ಗುರುತಿಸಿದ್ದು ಕಾಲನಿ ಮಾಡಿಕೊಡುವುದಾಗಿ ಜನರಿಗೆ ಮನ ಒಲಿಸಲಾಗಿದೆ ಇದಕ್ಕೆ ಅಲ್ಲಿನ ಜನರು ಒಪ್ಪಿರುವುದಾಗಿ ಅವರು ಮಾನ್ಯ ಸಂಸದರ ಗಮನಕ್ಕೆ ತಂದರು. ಈ

ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸುವಂತೆ ತಿಳಿಸಿ ಎಲ್ಲಾ ಕಡೆ ಜಾಗ ಕೊಡುತ್ತೇವೆ ಎನ್ನುವುದು ಸರಿಯಲ್ಲ ಕಟ್ಟಡಗಳ ವರ್ಟಿಕಲ್ ಆಗಿ ಅಭಿವೃದ್ಧಿಗೆ ಹೋಗಬೇಕಾಗುತ್ತದೆ ಎಂದು ಮಾನ್ಯ ಸಂಸದರು ಕಾರವಾರ–ಅಂಕೋಲಾ ವಿಧಾನ ಸಭಾ ಶಾಸಕಿಯವರಿಗೆ ಸಲಹೆ ನೀಡಿದರು. ಇದರ ಬಗ್ಗೆ ರಾಜೀವ ಗಾಂಧಿ ನಿಗಮದ ಎಂ.ಡಿ. ರವರೊಂದಿಗೆ ಮಾತನಾಡಿ ಇಲ್ಲಿಗೆ ಬರಲು ತಿಳಿಸುವುದು. ಹಾಗೂ ಫೇಬ್ರವರಿ–15–2020 ರೊಳಗೆ ಮಾನ್ಯ ಶಾಸಕಿಯವರೊಂದಿಗೆ ಚರ್ಚಿಸಿ ಪ್ರಸ್ತಾವನೆಯನ್ನು ತಯಾರಿಸಿ ಸಲ್ಲಿಸುವಂತೆ ಉಪವಿಭಾಗಾಧಿಕಾರಿಗಳು ಕಾರವಾರ ರವರಿಗೆ ಸೂಚಿಸಲಾಯಿತು.

(ಕ್ರಮ: ಉಪವಿಭಾಗಾಧಿಕಾರಿಗಳು ಕಾರವಾರ)

2) ಪಿ.ಎಂ.ಎ.ವೈ:

ಇಂದಿರಾ ಅವಾಸ ಯೋಜನೆಯಿಡಿ 2014–15 ನೇ ಸಾಲಿನಿಂದ ಮನೆಗಳು ಬಾಕಿ ಇವೆ, ಸುಮಾರು ಐದು ವರ್ಷಗಳಿಂದ ಮನೆ ನಿರ್ಮಿಸದೇ ಬಾಕಿ ಉಳಿದುಕೊಂಡಿವೆ. ಕೆಲವು ಮನೆಗಳು ಅಡಿಪಾಯ ಹಂತದಲ್ಲಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಮುಂದುವರೆದು 2014–15 ರಲ್ಲಿ ಮಂಜೂರಾದ ಮನೆಗಳ ಪೈಕಿ 86 ಬಾಕಿ ಇವೆ. 2015–16 ರಲ್ಲಿ 84, 2016–17 ರಲ್ಲಿ 10 ಮತ್ತು 2017–18 ರಲ್ಲಿ 52 ಮನೆಗಳು ನಿರ್ಮಾಣ ಹಂತದಲ್ಲಿವೆ. ಇಂತಹ ಫಲಾನುಭವಿಗಳಿಗೆ ನೋಟಿಸು ನೀಡಲು ಅಧಿಕಾರಿಗಳಿಗೆ ಸೂಚಿಸಿದರು. ಆಗ ಉಪಕಾರ್ಯದಶಿ(ಅಭಿವೃದ್ಧಿ) ಪ್ರ. ಜಿ.ಪಂ. ಕಾರವಾರ ರವರು ಮಾತನಾಡಿ, ಈಗಾಗಲೇ ಸಾಕಷ್ಟು ಬಾರಿ ನೋಟಿಸ ನೀಡಲಾಗಿದೆ ಎಂದರು. ಇಷ್ಟು ದೀರ್ಘ ಅವಧಿ ಮನೆ ನಿರ್ಮಾಣಕ್ಕೆ ಅವಕಾಶ ನೀಡುವುದು ಸಮಂಜಸವಲ್ಲ. ಇದರಿಂದ ಯೋಜನೆ ಪ್ರಗತಿ ಸಾಧ್ಯವಿಲ್ಲ. ಕೆಲವರಿಗಾದರೂ ಮನೆ ರದ್ದು ಮಾಡಿದರೆ ಉಳಿದವರಿಗೆ ಅರಿವು ಮೂಡಬಹುದು. ಈ ಕುರಿತು ಕಾಲಮಿತಿ ನೀಡಿ ತಕ್ಷಣ ಕ್ರಮ ಕೈಗೊಂಡು ಮುಂದಿನ ಸಭೆಯೊಳಗೆ ಏನು ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ತಿಳಿಸುವಂತೆ ಸೂಚಿಸಲಾಯಿತು.

ಸದರಿ ಯೋಜನೆಯಡಿ ಕೆಲವು ತಾಲೂಕುಗಳಲ್ಲಿ ಫಲಾನುಭವಿಗಳ ಆಯ್ಕೆ ಗುರಿಗೆ ತಕ್ಕಂತೆ ಆಗಿರುವುದಿಲ್ಲ ಆಯ್ಕೆ ತುಂಬಾ ನಿಧಾನ ಗತಿಯಲ್ಲಿ ಸಾಗುತ್ತಿದೆ ಎಂದು ಅಸಮಾಧಾನ ವ್ಯಕ್ತ ಪಡಿಸಿದರು. ಈಗಾಗಲೇ ಗ್ರಾಮ ಸಭೆಗಳ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯುತ್ತಿರುವುದಾಗಿ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು ತಿಳಿಸಿದರು. ಮಾರ್ಚ ಅಂತ್ಯಗೊಳಗೆ ಪಿ.ಎಂ.ಎ.ವೈ ಸ್ಟೇಟಸ್ ಸಿಗಬಹುದು. ಅದರೆ ಬಸವ, ಅಂಬೇಡ್ಕರ ಮತ್ತು ದೇವರಾಜ ಅರಸ್ ಯೋಜನೆಯಡಿ ಮನೆಗಳಿಗೆ ಅನುದಾನ ಬರುವುದು ಬಂದಾಗಿದ್ದು ಇದರ ಬಗ್ಗೆ ಮನೆ ಮಂಜೂರಾದ ಜಾಗದಲ್ಲಿ ನಿಜವಾಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂಬ ಬಗ್ಗೆ ಪರಿಶೀಲಿಸಲು Vijil AAP ಮಾಡುತ್ತಿರುವ ವಿಷಯವನ್ನು ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು ಸಂಸದರ ಗಮನಕ್ಕೆ ತಂದರು. Vijil AAP ಅನಾಲೈಸಸ್ ಮಾಡಿದ ಬಗ್ಗೆ ಪ್ರಸ್ತುತ ಮಾಹಿತಿ ಕಳುಹಿಸುವಂತೆ ಸಂಸದರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದರು.

(ಕ್ರಮ: ಉಪಕಾರ್ಯದರ್ಶಿ(ಅಭಿವೃದ್ಧಿ,ಜಿಪಂ)

3. ಪಿ.ಎಂ.ಜಿ.ಎಸ್.ವೈ:

ರಸ್ತೆ ಕಾಮಗಾರಿಗಳಿಗೆ ಶಾಸಕರು ಅನುದಾನ ಕೊಡುತ್ತಿರುವುದರಿಂದ ಅವರೊಂದಿಗೆ ಚರ್ಚಿಸಿ, ಕ್ರಿಯಾ ಯೋಜನೆ ತಯಾರಿಸಿ ಸಲ್ಲಿಸಲು ಸೂಚಿಸಲಾಯಿತು.

(ಕ್ರಮ: ಪಿ.ಎಂ.ಜಿ.ಎಸ್.ವೈ)

4. ಎನ್.ಆರ್.ಡಿ.ಡಬ್ಲೂ.ಪಿ.:

ಹಿಂದಿನ ಸಭೆಯಲ್ಲಿ ನೀರಿನ ಗುಣಮಟ್ಟದ ಬಗ್ಗೆ ಚರ್ಚೆ ಮಾಡಲಾಗಿತ್ತು. ಇಕೊಲಿಸ್ ಬ್ಯಾಕ್ಟೇರಿಯಾಗಳನ್ನು ಹೋಗಲಾಡಿಸಲು ತಂತ್ರಜ್ಞಾನವನ್ನು ಹೇಗೆ ಮಾಡಬೇಕು, ಏನು ಮಾಡಬೇಕು ಎಂಬ ಬಗ್ಗೆ ಅನುಮೋದನೆ ಪಡೆದುಕೊಳ್ಳಲು ತಿಳಿಸಿ,ಈ ತಂತ್ರಜ್ಞಾನವನ್ನು ಹೇಗೆ ಉಪಯೋಗಿಸಬೇಕು ಎಂಬ ಬಗ್ಗೆ ನಂತರ ತಿಳಿಸುವುದಾಗಿ ಮಾನ್ಯ ಸಂಸದರು ತಿಳಿಸಿದರು. ಜಿಲ್ಲೆಯಲ್ಲಿ ಇ–ಕೊಲಿ ಬ್ಯಾಕ್ಟೇರಿಯಾ ಸಮಸ್ಯೆಯನ್ನು ಸಂಪೂರ್ಣ ನಿರ್ಮೂಲನ ಮಾಡಬೇಕು. ಜಿಲ್ಲೆಯಲ್ಲಿ 16,833 ಬಾವಿಗಳ ಪೈಕಿ 9,600 ಬಾವಿಗಳ ನೀರು ಕಲುಷಿತವಾಗಿರುವುದು ಕಂಡುಬಂದಿದೆ. ಪರಿಶೀಲನೆ ಆರಂಭಿಸಿದ ನಂತರ ಪ್ರವಾಹ ಉಂಟಾಗಿದ್ದರಿಂದ ಕೆಲ ಬಾವಿಗಳು ತಾತ್ಕಾಲಿಕವಾಗಿ ಕಲುಷಿತಗೊಂಡು ಈಗ ಸರಿಹೋಗಿರಬಹುದು. ನೀರು ಕಲುಷಿತಗೊಂಡರೂ ಜನರು ಅದೇ ನೀರನ್ನು ಕುಡಿಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಸಮರ್ಪಕವಾಗಿ ಪರಿಶೀಲಿಸಲು ಸೂಚಿಸಿದರು.

ಹಿಂದಿನ ಸಭೆಯಲ್ಲಿ ನೀರು ಶುದ್ಧಿಕರಣಕ್ಕೆ ಸಿಲ್ವರ್ ನ್ಯಾನೋ ತಂತ್ರಜ್ಞಾನವನ್ನು ಬಳಸಲು ಸೂಚಿಸಲಾಗಿತ್ತು. ಆದರೆ ಅಧಿಕಾರಿಗಳು ಉಪಕರಣ ತಂದಿದ್ದಾರೆ. ಉಪಕರಣಕ್ಕೂ ತಂತ್ರಜ್ಞಾನಕ್ಕೂ ಇರುವ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬೇಕು. ರಾಸಾಯನಿಕ ಬಳಸಿ ಬಾವಿಗಳ ನೀರು ಶುದ್ಧೀಕರಣ ಮಾಡಲು ಸಾಧ್ಯವಿಲ್ಲ ಪೇಟೆಂಟ್ ತಂತ್ರಜ್ಞಾನವನ್ನೇ ಬಳಸಬೇಕು. ಇದನ್ನು ಸಿವಿಲ್ ಇಂಜಿನೀಯರ್‌ಗಳಿಂದ ಸಾಧ್ಯವಿಲ್ಲ. ವಿಶೇಷ ತಜ್ಞರ ನೆರವನ್ನು ಪಡೆಯಬೇಕು. ಇದಕ್ಕೆ ಸಂಬಂಧಿಸಿದಂತೆ ಧಾರವಾಡ ಯುನಿವರ್‌ಸಿಟಿ, ಕೃಷಿ ಯುನಿವರ್‌ಸಿಟಿಯಿಂದ ಅಥವಾ ಇಲಾಖೆಗಳಿಂದ ವಿಶೇಷ ತಜ್ಞರನ್ನೊಳಗೊಂಡ ಟಾಸ್ಕ ಫೋರ್ಸ್ ಸಮಿತಿಯನ್ನು ಜನವರಿ-10-2020 ರೊಳಗೆ ರಚಿಸುವಂತೆ ಹಾಗೂ ಪ್ರತ್ಯೇಕ ಸಿಸ್ಟಂನಲ್ಲಿ ಡಾಟಾ ಅನಾಲಿಸಿಸ್ ಸಾಪ್ಟ್‌ವೇರ್ ಅಳವಡಿಸಿ ಡಾಟಾ ಎಂಟ್ರಿ ಮಾಡುವುದು. ಇವೆಲ್ಲವುಗಳ ಬಗ್ಗೆ ಪೇಬ್ರವರಿ-15-2020ರೊಳಗೆ ರೋಡ್ ಮ್ಯಾಪ್ ಮಾಡಿ, ಮಾರ್ಚ-ಏಪ್ರಿಲ್‌ನಲ್ಲಿ ಕ್ರಿಯಾ ಯೋಜನೆ ಪೂರ್ಣಗೊಳಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಯಿತು. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾಗಿಳು ಹಾಗೂ ತಹಶೀಲ್ದಾರರು ಗಮನ ಹರಿಸಲು ಸೂಚಿಸಿದರು.

ಎನ್.ಎಸ್.ಪಿ.ಪಿ. ಆದ 1,475 ನೀರಿನ ಮೂಲಗಳ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ನೀರಿನ ಮೂಲಗಳಿಗೆ ಕ್ಲೋರಿನೇಷನ್ ಮಾಡಿದರೆ ಆಗುವುದಿಲ್ಲ.ಈ ಸಮಸ್ಯೆ ಜಾಸ್ತಿಯಾಗುತ್ತಾ ಹೋಗುತ್ತದೆ. ಇದಕ್ಕೆ ವಿಶೇಷ ತಂತ್ರಜ್ಞಾನವೇ ಬೇಕಾಗುತ್ತಿದೆ ಇದನ್ನು ಹೋಗಲಾಡಿಸಲು ಎಕ್ಸಪರ್ಟಗಳಿಂದ ಮಾತ್ರ ಸಾಧ್ಯ. ಇದಕ್ಕೆ ಬೇಕಾಗುವ ಪರಿಹಾರಗಳನ್ನು ಕಂಡುಕೊಳ್ಳುವುದು. ಹೆಚ್ಚಿನ ಅನುದಾನ ಬೇಕಾದಲ್ಲಿ ಬೇಡಿಕೆ ಸಲ್ಲಿಸಲು ಸೂಚಿಸಲಾಯಿತು

ಕಾರವಾರ-ಅಂಕೋಲಾ ವಿಧಾನ ಸಭಾ ಕ್ಷೇತ್ರದ ಶಾಸಕಿಯವರು ಮಾತನಾಡಿ ಕುಡಿಯುವ ನೀರಿನ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸಿ ಜನರಿಗೆ ಕುಡಿಯುವ ನೀರು ಪೂರೈಸುವ ವ್ಯವಸ್ಥೆ ಮಾಡಬೇಕು ಎಂದರು.

ಮಾನ್ಯ ಜಿಲ್ಲಾಧಿಕಾರಿಗಳು ಹಳ್ಳಿಗಳಲ್ಲಿ ಹಾಕಿರುವ ಪೈಪ್‌ಲೈನ್ ವಿಸ್ತರಣೆ, ದುರಸ್ಥಿಗಾಗಿ ಪ್ರಕೃತಿ ವಿಕೋಪದಡಿ ಅನುದಾನ ನೀಡುವುದಾಗಿ ತಿಳಿಸಿ. ಈ ತಿಂಗಳಲ್ಲೇ ಎಲ್ಲಾ ತಾಲೂಕುಗಳಿಂದ ಮಾಹಿತಿ ಪಡೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಪರಿಶೀಲನೆ ಮಾಡಿ 15 ದಿನದೊಳಗೆ ಜಿಲ್ಲಾಧಿಕಾರಿಗಳ ಕಛೇರಿಗೆ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಇದರ ಬಗ್ಗೆ ಎಲ್ಲಾ ತಾಲೂಕುಗಳಲ್ಲಿ ಮಾಹಿತಿ ಇದ್ದು, ಅದನ್ನು ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪಡೆದು ಈ ವರ್ಷ ಟ್ಯಾಂಕ್ ಮೂಲಕ ನೀರು ಪೂರೈಸಿದ 425 ಗ್ರಾಮ ಪಂಚಾಯತಿಗಳನ್ನು ಗಮದಲ್ಲಿಟ್ಟುಕೊಂಡು ಜನವರಿ-2020 ಅಂತ್ಯದೊಳಗೆ ಮಾಹಿತಿ ಒದಗಿಸುವುದಾಗಿ ತಿಳಿಸಿ, ಇದರ ಬಗ್ಗೆ ರೋಡ್‌ಮ್ಯಾಪನ್ನು ಒದಗಿಸುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದರು.

ಕುಮಟಾ ತಾಲೂಕಿನಲ್ಲಿ ಹಿಂದಿನ ಸಲ ಬರ ಬಂದ ಸಂದರ್ಭದಲ್ಲಿ ಪೈಪ್‌ಲೈನ್ ವಿಸ್ತರಣೆ ಹಾಗೂ ದುರಸ್ಥಿ ಬಗ್ಗೆ ದೂರುಗಳು ಬಂದಿರುತ್ತವೆ. ಇದರ ಬಗ್ಗೆ ಕೆಲವು ಪಿ.ಡಿ.ಓ. ರವರು ಮಾತ್ರ ಆಸಕ್ತಿ ವಹಿಸುತ್ತಾರೆ ಆದ್ದರಿಂದ ಇದರ ಬಗ್ಗೆ ನೀವೇ ಮಾಹಿತಿ ಒದಗಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಕುಮಟಾ ರವರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಹಳ್ಳಿಗಳಲ್ಲಿ ಹಾಗೂ ಮನೆಗಳಿಗೆ ಹಾಕಿರುವ ಪೈಪ್‌ಲೈನ್‌ಗಳ ನಿರ್ವಹಣೆಗಾಗಿ ಗುತ್ತಿಗೆದಾರರಿಗೆ ಹಾಕಿರುವ ಷರತ್ತುಗಳ ಬಗ್ಗೆ ವಿಚಾರಿಸಿ, ಎಷ್ಟೋ ಕಡೆಗಳಲ್ಲಿ ಮಾಡಿರುವ ಕೆಲಸ ಕಳಪೆಯಾಗಿದೆ. ಆದ್ದರಿಂದ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ. ಇದಕ್ಕಾಗಿ ಗುತ್ತಿಗೆದಾರರನ್ನು ಜವಾಬ್ದಾರಿಯನ್ನಾಗಿ ಮಾಡಬೇಕು. ಈ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜೊತೆ ಮಾತನಾಡಿ, ಪಿ.ಆರ್.ಇ.ಡಿ. ಹಾಗೂ ಪಿ.ಡಬ್ಲ್ಯೂಡಿಗಳಲ್ಲಿ ಇರುವಂತೆ ಕುಡಿಯುವ ನೀರಿನ ಕಾಮಗಾರಿ ಪಡೆಯುವ ಗುತ್ತಿಗೆದಾರರಿಗೂ ಕೂಡ ಟೆಂಡರ್ ಮತ್ತು ತುಂಡುಗುತ್ತಿಗೆ ಕಾಮಗಾರಿಗಳು ಸಹ 5 ವರ್ಷಗಳ ಸರ್ವಿಸ್ ಷರತ್ತು ಹಾಕುವುದು. ಲೈಸನ್ಸ್ ಇರುವ ಗುತ್ತಿಗೆದಾರರಿಗೆ ಮಾತ್ರ ಗುತ್ತಿಗೆ ಕೊಡುವ ಬಗ್ಗೆ ಕ್ರಮ ವಹಿಸಲು ಸೂಚಿಸಿ, ಇದರ ಬಗ್ಗೆ ಮುಂದಿನ ದಿಶಾ ಸಭೆಯೊಳಗೆ ವರದಿ ಸಲ್ಲಿಸಲು ತಿಳಿಸಿದರು.

ಸದರಿ ಯೋಜನೆಯಡಿ ಪ್ರಗತಿ ಕುಂಠಿತವಾಗಿರುವ ಬಗ್ಗೆ ವಿಚಾರಿಸಿದರು. ಸದರಿ ವಿಷಯದ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸದರಿ ಯೋಜನೆಯಡಿ 1370 ಮುಂದುವರಿದ ಕಾಮಗಾರಿಗಳು ಇದ್ದು, ಎಲ್ಲಾ ಮುಂದುವರಿದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ಆರಂಭಿಕ ಶಿಲ್ಕು 19 ಕೋಟಿ ಇದ್ದು. ಈಗ ಬಿಡುಗಡೆಯಾದ ಅನುದಾನ ಸೇರಿ ಒಟ್ಟೂ 41 ಕೋಟಿ ಅನುದಾನಲ್ಲಿ ರೂ. 21.5 ಕೋಟಿ ವೆಚ್ಚ ಮಾಡಲಾಗಿದೆ.15.5 ಕೋಟಿ ಅನುದಾನ ಇದ್ದು, ಇದ್ದರೂ ಅಸಸೆಮೆಂಟ್ ಮಾಡಲಾಗಿದೆ. ಪ್ರತಿ ತಿಂಗಳು 8 ಕೋಟಿ ಖರ್ಚು ಮಾಡುವ ಬಗ್ಗೆ ಗುರಿ ಇಟ್ಟುಕೊಂಡು ಫೇಬ್ರವರಿ ಮತ್ತು ಮಾರ್ಚ-2020 ಅಂತ್ಯದೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸುವುದಾಗಿ ತಿಳಿಸಿದರು.

(ಕ್ರಮ: ಕುಡಿಯುವ ನೀರು & ನೈರ್ಮಲ್ಯ ವಿಭಾಗ)

ನಗರ ಪ್ರದೇಶಗಳಲ್ಲಿ ಎಲ್ಲಾ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವಂತೆ ಚೀಫ್ ಆಫೀಸರ್ ರವರಿಗೆ ಆದೇಶ ನೀಡಿದ್ದು, ಇದರ ಮೇಲುಸ್ತುವಾರಿಯನ್ನು ಅಪರ ಜಿಲ್ಲಾಧಿಕಾರಿಗಳಿಗೆ ವಹಿಸಿರುವುದಾಗಿ ಜಿಲ್ಲಾಧಿಕಾರಿಗಳು ಮಾನ್ಯ ಸಂಸದರ ಗಮನಕ್ಕೆ ತಂದರು ಎಲ್ಲಾ ಚೀಫ್ ಆಫೀಸರ್ ರವರೊಂದಿಗೆ ಸಭೆ ಕರೆದು ಜನವರಿ-2020 ಅಂತ್ಯದೊಳಗೆ ರಸ್ತೆಗಳಲ್ಲಿ ಬಿದ್ದಿರುವ ಪೂರ್ತಿ ಗುಂಡಿಗಳನ್ನು ಮುಚ್ಚುವ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

ಮಂಗನ ಕಾಯಿಲೆ ಬಗ್ಗೆ ಮಾನ್ಯ ಸಂಸದರರು ವಿಚಾರಿಸಿದರು. ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಂಗನ ಕಾಯಿಲೆ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಪ್ರಸಕ್ತ ಸಾಲಿನ ಜನವರಿಯಿಂದ ಈ ವರೆಗೆ ಜಿಲ್ಲೆಯಲ್ಲಿ 87 ಮಂಗನ ಕಾಯಿಲೆ ಪ್ರಕರಣಗಳು ಬೆಳಕಿಗೆ ಬಂದಿದ್ದು, 3 ಸಾವು ಸಂಭವಿಸಿದೆ. 3 ಹಂತಗಳಲ್ಲಿ ಕಾಯಿಲೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ. ಕಾಯಿಲೆ ಕಂಡು ಬಂದ ಪ್ರದೇಶಗಳಲ್ಲಿ ಡಿ.ಎಂ.ಪಿ ಬಳಸಲು ಸೂಚಿಸಿ ಪೂರೈಕೆ ಸಹ ಮಾಡಲಾಗಿದೆ. ಮಂಗಗಳು ಸತ್ತ ಜಾಗದ ಸುತ್ತಮುತ್ತ ತಿಗಣೆ ನಿರೋಧಕ ಪುಡಿ ಸಿಂಪಡಿಸಲಾಗುತ್ತಿದೆ. ಅಲ್ಲದೆ ಜನರಿಗೆ ಲಸಿಕೆಯನ್ನು ಹಾಕಲಾಗುತ್ತಿದೆ ಎಂದರು.

ಜಿಲ್ಲಾಧಿಕಾರಿಗಳು ಮಾತನಾಡಿ, ಈ ಕುರಿತು 2-3 ಸಲ ಮುಖ್ಯ ಕಾರ್ಯನಿರ್ವಾಹಕ ಅಧಿಕಾಗಳೊಂದಿಗೆ ಸಭೆ ಮಾಡಿದ್ದು, ಸಿದ್ದಾಪುರದಲ್ಲಿ ವಿಶೇಷ ಘಟಕ ನಿರ್ಮಾಣ ಮಾಡಬೇಕು ಎಂಬ ಜನರ ನಿರೀಕ್ಷೆ ಇದೆ. ಕಾಯಿಲೆಗೆ ತುತ್ತಾದವರಿಗೆ ಅಸ್ವಸ್ಥತೆ ಕಾರಣದಿಂದ ಕೆಲಸ ಮಾಡಲು ಆಗದಿರುವುದರಿಂದ ಅಕ್ಕಿ, ದವಸದಾನ್ಯ ವಿಶೇಷ ಹಣ ಒದಗಿಸಬೇಕು ಎಂಬ ಬೇಡಿಕೆಗಳು ಇವೆ.ಅಲ್ಲದೇ ಮಣಿಪಾಲ,ಮಂಗಳೂರಿನ ಆಸ್ಪತ್ರೆಗಳಿಗೆ ಚಿಕಿತ್ಸೆಗೆ ತೆರಳಲು ಅಂಬ್ಯುಲೆನ್ಸ್ ಒದಗಿಸುವುದು ಮತ್ತು ಚಿಕಿತ್ಸಾ ವೆಚ್ಚವನ್ನು ಭರಿಸಬೇಕು ಎಂದು ಸೂಚಿಸಿದಾಗ ಕಾಯಿಲೆ ಪೀಡಿತರಿಗೆ ಆಯುಷ್ಮಾನ್ ಭಾರತ್ ಯೋಜನೆಯಡಿ ಚಿಕಿತ್ಸಾ ವೆಚ್ಚ ಭರಿಸಲಾಗುತ್ತಿದೆ ಎಂಬ ಮಾಹಿತಿಯನ್ನು ಮಾನ್ಯ ಸಂಸದರ ಗಮನಕ್ಕೆ ತಂದರು.

ಆಯುಷ್ಮಾನ ಭಾರತ್ ಯೋಜನೆಯಡಿ ಕಾರ್ಡ ಒದಗಿಸುವ ಸಮಸ್ಯೆಯನ್ನು ಇದುವರೆಗೂ ಬಗೆಹಿರಿಸಿರುವುದಿಲ್ಲ. ಸದರಿ ಕಾರ್ಡನ್ನು ಪಡೆಯಲು ಕಾರವಾರಕ್ಕೆ ಬರಬೇಕು ಎಂಬ ಭ್ರಮೆ ಇದುವರೆಗೂ ಜನರಲ್ಲಿ ಇದೆ. ಸದರಿ ಯೋಜನೆ ಬಗ್ಗೆ ಇನ್ನೂ ಜನರಲ್ಲಿ ಸರಿಯಾದ ಜ್ಞಾನ ಬಂದಿಲ್ಲ. ಆದ್ದರಿಂದ ಇದರ ಬಗ್ಗೆ ಹೆಚ್ಚಿನ ಪ್ರಚಾರ ಕೈಗೊಳ್ಳಬೇಕು. ತಾಲೂಕು ಮಟ್ಟದಲ್ಲಿರುವ ಅಧಿಕಾರಿಗಳಿಗೆ ಸ್ಥಳೀಯವಾಗಿ ಮಾದ್ಯಮಗಳ ಮೂಲಕ ಪ್ರಚಾರ ಮಾಡುವಂತೆ ಸೂಚನೆ ನೀಡುವುದು. ಸದರಿ ಯೋಜನೆಯ ಪ್ರಚಾರಕ್ಕಾಗಿ 1-2 ಕಾರ್ಯಕ್ರಮ ಮಾಡುವುದು. ಒಬ್ಬೊಬ್ಬರು ಒಂದೊಂದು ದಿನ ಮಾದ್ಯಮಗಳ ಮೂಲಕ ಪ್ರಚಾರ ಮಾಡಲು ಸೂಚಿಸಲಾಯಿತು.

(ಕ್ರಮ: ಆರೋಗ್ಯ ಇಲಾಖೆ)

5) ಡಿ.ಡಿ.ಯು.ಜಿಕೆವೈ:

ಕೌಶಲ್ಯ ತರಬೇತಿ ಕೇಂದ್ರವನ್ನು ಈಗಾಗಲೇ ಹಳಿಯಾಳದಲ್ಲಿ ಇದೆ. ಮತ್ತೊಂದು ಕೇಂದ್ರವನ್ನು ಹಳಿಯಾಳದಲ್ಲಿಯೇ ಸ್ಥಾಪಿಸುವುದಾಗಿ ಪಿ.ಐ.ಓ. ಪ್ರತಿನಿಧಿಗಳು ತಿಳಿಸಿದಾಗ, ಜಿಲ್ಲೆ ದೊಡ್ಡದಿದೆ ತರಬೇತಿ ಕೇಂದ್ರವನ್ನು ಸಿರ್ಸಿ,ಸಿದ್ದಾಪುರ ಅಥವಾ ಕರಾವಳಿ ಭಾಗಗಳಲ್ಲಿ ವಿಸ್ತರಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.

(ಕ್ರಮ: ಡಿ.ಡಿ.ಯು.ಜಿಕೆ.ವೈ)

6) ಅಂಗವಿಕಲ:

ವಿಕಲಚೇತನರಿಗೆ ಸೈಕಲ್ ಹಾಗೂ ಇತರೆ ಉಪಕರಣಗಳಿಗಾಗಿ ಬಂದ ಅರ್ಜಿಗಳು ಎಷ್ಟಿವೆ ಎಂಬ ಬಗ್ಗೆ ಸಂಸದರು ವಿಚಾಸಿದರು. ಸುಮಾರು 600ಕ್ಕೂ ಹೆಚ್ಚು ಅರ್ಜಿಗಳಿರುವುದಾಗಿ ಉಪನಿರ್ದೇಶಕರು,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರವರು ತಿಳಿಸಿದರು. 1,000 ಅರ್ಜಿಗಳು ಇದ್ದಲ್ಲಿ ವಿಕಲಚೇತನರು ಎಂದು ಯಾವುದನ್ನು ಪರಿಗಣಿಸುತ್ತಿರೋ ಅದೇ ಅಡಿಯಲ್ಲಿ ಅಲಿಂಕೊ ರವರಿಂದ ದೊಡ್ಡ ಪ್ರಮಾಣದ ಕ್ಯಾಂಪ್ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.

ಕಾರವಾರ–ಅಂಕೋಲಾ ವಿಧಾನ ಸಭಾ ಕ್ಷೇತ್ರದ ಶಾಸಕಿಯವರು ಮಾತನಾಡಿ, ಅಂಗವಿಕಲರಿಗೆ ನೀಡುತ್ತಿರುವ ಸೌಲಭ್ಯವನ್ನು ಅವರ ಪಾಲಕರಿಗೆ ಕೊಡುವ ಬಗ್ಗೆ ವಿಷಯ ಪ್ರಸ್ತಾಪಿಸಿದರು. ಅಂಗವಿಕಲರಿಗೆ ಕೊಡುವ ಸೌಲಭ್ಯ ಅವರ ಪಾಲಕರಿಗೆ ಅಧಿಕೃತವಾಗಿ ಕಾನೂನು ಪರಿದಿಯಲ್ಲಿ ಕೊಡಲು ಬರುವುದಿಲ್ಲ. ಅವರನ್ನು ಪರೀದಿಯಲ್ಲಿ ಹೇಗೆ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಯೋಚನೆ ಮಾಡುವಂತೆ ತಿಳಿಸಲಾಯಿತು

ಕಾರವಾರ–ಅಂಕೋಲಾ ವಿಧಾನ ಸಭಾ ಕ್ಷೇತ್ರದ ಶಾಸಕಿಯವರು ಮಾತನಾಡಿ, ವಿಕಲಚೇತನರಿಗೆ ವೈದ್ಯಕೀಯ ಪ್ರಮಾಣ ಪತ್ರ ಪಡೆಯಲು ಜಿಲ್ಲಾ ಆಸ್ಪತ್ರೆಗೆ ಬಂದು ಪರದಾಡಬೇಕಾಗುತ್ತದೆ. ಇದರಿಂದ ತುಂಬಾ ಸಮಸ್ಯೆ ಉಂಟಾಗುತ್ತದೆ ಎಂದರು. ವಿಕಲಚೇತನರು ಇರುವ ಕಡೆ ಸಿಬ್ಬಂದಿಗಳನ್ನು ನೇಮಿಸಬೇಕು ಎಂಬ ವಿಷಯವನ್ನು ಪ್ರಸ್ತಾಪಿಸಿದರು.

ಆಗ ಜಿಲ್ಲಾಧಿಕಾರಿಗಳು ಟೆಲಿ ಕಾನ್ಫರೆನ್ಸ್ ಮಾಡುವ ಬಗ್ಗೆ ಸಲಹೆ ನೀಡಿದರು. ಜಿಲ್ಲಾ ಶಸ್ತ್ರಚಿಕಿತ್ಸಕರಿಗೆ ಮತ್ತು ತಜ್ಞ ವೈದ್ಯರುಗಳಿಗೆ ಟೆಲಿ ಕಾನ್ಫರೆನ್ಸ್ ಮೂಲಕ ವಿಕಲಚೇತನರಿಗೆ ಪರೀಕ್ಷೆ ಮಾಡುವ ಬಗ್ಗೆ ಹೆಲ್ತ ಸಕ್ರೇಟರಿಯಿಂದ ಪರವಾನಗಿ ಪಡೆಯುವಂತೆ ಸೂಚಿಸಲಾಯಿತು.

(ಕ್ರಮ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಆರೋಗ್ಯ ಇಲಾಖೆ)

7) ಐ ಡಬ್ಲ್ಯೂ ಎಂ ಪಿ:

ಸದರಿ ಯೋಜನೆಯಡಿ ಪ್ರಗತಿ ಕುಂಠಿತವಾಗಿರುವ ಬಗ್ಗೆ ವಿಚಾರಿಸಲಾಗಿ, ಈಗ ಅನುದಾನ ಬಂದಿದ್ದು, ಫೇಬ್ರವರಿ–2020 ಅಂತ್ಯದೋಳಗೆ ಪ್ರಗತಿ ಸಾಧಿಸುವುದಾಗಿ ಅಧಿಕಾರಿಗಳು ತಿಳಿಸಿದರು.

8) ಎಸ್.ಬಿ.ಎಂ.:

ಈ ವರ್ಷ ಓ.ಡಿ.ಎಫ್ (+) ಅಡಿಯಲ್ಲಿ 10,015 ಶೌಚಾಲಯಗಳ ನಿರ್ಮಾಣ ಮಾಡುವ ಗುರಿ ಇದ್ದು, ಅದರಲ್ಲಿ ಈಗಾಗಲೇ 8,145 ಶೌಚಾಲಯಗಳನ್ನು ಪೂರ್ಣಗೊಳಿಸಿ, ರಾಜ್ಯಕ್ಕೆ 2ನೇ ಸ್ಥಾನದಲ್ಲಿ ಇರುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದರು.

ಜಿಲ್ಲೆಯಲ್ಲಿ ಇರುವ ಮಜರೆಗಳ ಬಗ್ಗೆ ವಿಚಾರಿಸಿ, ಕೇವಲ ಹಳ್ಳಿಗಳನ್ನು ತೆಗೆದುಕೊಂಡಲ್ಲಿ ಪ್ರಗತಿ ಸಾಧ್ಯವಾಗುವುದಿಲ್ಲ. ಜಿಲ್ಲೆಯಲ್ಲಿ ಸಣ್ಣ ಸಣ್ಣ ಮಜೆರೆಗಳು ಇವೆ ಅಲ್ಲಿ ಗಮನಹರಿಸಿದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಸಾಧ್ಯ ಎಂದರು. ಒಟ್ಟು 1432 ಮಜರೆಗಳಲ್ಲಿ ಎಷ್ಟು ಮಜರೆಗಳಲ್ಲಿ ಶೌಚಾಲಯ ನಿರ್ಮಿಸಲಾಗಿದೆ.. ಒಟ್ಟು ಎಷ್ಟು ಮನೆಗಳಿಗೆ ಶೌಚಾಲಯ ನಿರ್ಮಾಣ ಮಾಲಾಗಿದೆ ಎಂಬ ಬಗ್ಗೆ ಸರ್ವೇ ಮಾಡಿ ಇನ್ನು ಎಷ್ಟು ಶೌಚಾಲಯಗಳು ಬಾಕಿ ಇವೆ ಎಂಬ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿದರು. ಈಗಾಗಲೇ 2,27,878 ಶೌಚಾಲಗಳನ್ನು ನಿರ್ಮಾಣ ಮಾಡಿದ್ದು, 10,015 ಬಾಕಿ ಇರುವುದಾಗಿ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು ತಿಳಿಸಿದರು. ಸದರಿ ಶೌಚಾಲಯಗಳಲ್ಲಿ ಎಷ್ಟು ಶೌಚಾಲಯಗಳು ಉಪಯೋಗಿಸಲಾಗುತ್ತಿದೆ ಎಂಬ

ಬಗ್ಗೆ ತಾಲೂಕುವಾರು ಸರ್ವೇ ಮಾಡಿ ಜನವರಿ-2020 ಅಂತ್ಯದೊಳಗೆ ಮಾಹಿತಿ ಒದಗಿಸಲು ಸೂಚಿಸಲಾಯಿತು.

(ಕ್ರಮ: ಉಪಕಾರ್ಯದರ್ಶಿ(ಆಡಳಿತ))

9) ಎಸ್‌ಎಲ್‌ಡಬ್ಲ್ಯೂಎಂ:

ಜಿಲ್ಲೆಯಲ್ಲಿ ಸೊಲಿಡ್ ಲಿಕ್ವಿಡ್ ವೇಸ್ಟ್ ಮೆನೆಜ್‌ಮೆಂಟ್ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ತಾಜ್ಯ ವಿಲೇವಾರಿಗೆ ಮುಂಬೈ ನೌಕಾನೆಲೆಯಲ್ಲಿ ಸ್ಥಾಪಿಸಲಾದ ಸಂಸ್ಕರಣಾ ಘಟಕವನ್ನು ತುಂಬಾ ಚೆನ್ನಾಗಿ ಮಾಡಿದ್ದಾರೆ. ಸದರಿ ಘಟಕ್ಕೆ ಅಧಿಕಾರಿಗಳು ಬೇಟಿ ನೀಡಿ ಪರಿಶೀಲಿಸಿ ಅದೇ ಮಾದರಿ ಘಟಕ ಸ್ಥಾಪಿಸುವ ಬಗ್ಗೆ ಕ್ರಮ ವಹಿಸಲು ತಿಳಿಸಿದರು.

ಪ್ರವಾಸಿ ತಾಣಗಳು, ಪ್ರಮುಖ ರಸ್ತೆಗಳ ಅಕ್ಕ ಪಕ್ಕ ಹೇರಳ ಪ್ರಮಾಣದಲ್ಲಿ ಬೀಳುವ ಪ್ಲಾಸ್ಟೀಕ ಕಪ್ ,ಬಾಟಲ ಹಾಗೂ ಇತರೆ ತ್ಯಾಜ್ಯಗಳನ್ನು ತೆರವುಗೊಳಿಸಲು ಹೆವಿ ಡ್ಯೂಟಿ ಯಂತ್ರೋಪಕರಣ ಬಳಕೆ ಮಾಡುವ ಬಗ್ಗೆ ಗಮನ ಹರಿಸುವಂತೆ ಸೂಚಿಸಲಾಯಿತು, ರಾತ್ರಿ ವೇಳೆ ಪಾರ್ಟಿ ಮಾಡುವ ಸ್ಥಳಗಳಲ್ಲಿ ಯಾರು ಕ್ಯಾಂಟೀನ ನಡೆಸುತ್ತಾರೋ ಅವರೇ ತಾಜ್ಯಗಳನ್ನು ತೆರವುಗೊಳಿಸುವದು. ತೆರವುಗೊಳಿಸದಿದ್ದಲ್ಲಿ ಕ್ಯಾಂಟೀನ ಮಾಲಕರಿಗೆ ದಂಡ ವಿದಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

ಅನೇಕ ಹೊಟೇಲ್, ಫಾಸ್ಟ್ ಪುಡ್ ಸೆಂಟರ್‌ಗಳಲ್ಲಿ ತಿನಿಸು ತಯಾರಿಕೆಗೆ ಬಳಸುತ್ತಿರುವ ಅಜಿನೋಮೋಟೋದಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದು ಗಮನಕ್ಕೆ ಬಂದಿದ್ದು, ಇಂತಹ ಹಾನಿಕಾರಕ ಪದಾರ್ಥ ಬಳಕೆ ನಿಲ್ಲಿಸಲು ಅವುಗಳ ಬಳಕೆಯ ಮೇಲೆ ನಿಷೇಧ ಹೇರುವಿಕೆ ಅನಿವಾರ್ಯ ಎಂದರು. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಪರಿಶೀಲನೆ ನಡೆಸಿ ಅಜಿನೊಮೋಟೋ ಬಳಕೆಯಾಗದಂತೆ ನಿಗಾವಹಿಸುವಂತೆ ಸೂಚಿಸಲಾಯಿತು.

(ಕ್ರಮ: ಸಹಾಯಕ ಕಮೀಷನ್, ಕಂದಾಯ ಇಲಾಖೆ/ಅಹಾರ ಇಲಾಖೆ)

10) ತೋಟಗಾರಿಕೆ :

ಇಲಾಖಾ ಪ್ರಗತಿ ಪರಿಶೀಲಿಸಲಾಗಿ, ಪ್ರಗತಿ ತುಂಬಾ ಕುಂಠಿತವಾಗಿದ್ದು, ತುಂಬಾ ಗಂಬೀರವಾಗಿ ತೆಗೆದುಕೊಂಡು ಪ್ರಗತಿಸಾಧಿಸಲು ಸೂಚಿಸಿ, ಇಲಾಖೆ ಯೋಜನೆಗಳನ್ನು ಹೇಗೆ ಅನುಷ್ಟಾನ ಮಾಡಬೇಕು ಎಂಬ ಬಗ್ಗೆ ಮಾಹಿತಿ ಒದಗಿಸಲು ತಿಳಿಸಿ, ಫೇಬ್ರವರಿ-2020 ಅಂತ್ಯದೊಳಗೆ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ಸಂಸದರು ಸೂಚಿಸಿದರು.

ಜೇನು ಕೃಷಿಗೆ 10000 ಹೆಚ್ಚುವರಿ ಪೆಟ್ಟಿಗೆಗಳ ಅವಶ್ಯಕತೆ ಇದ್ದು, ಇದಕ್ಕಾಗಿ **National bee Mission** ನವರು ಹಣ ಕೊಡುತ್ತಿದ್ದು, ಈಗಾಗಲೇ ಭಾಗಲಕೋಟೆ ಜಿಲ್ಲೆಗೆ ಹಣ ಕೊಡಲಾಗಿದೆ ಎಂದು ಸಂಸದರು ತಿಳಿಸಿದರು. ಮುಂದುವರೆದು ಜೇನು ಕೃಷಿಯನ್ನು ಮಿಷನ್ ಮೋಡನಲ್ಲಿ ತೆಗೆದುಕೊಳ್ಳಲು ಸಲಹೆ ನೀಡಿದರು. ಈಗಾಗಲೇ ಫಲಾನುಭವಿಗಳ ಆಯ್ಕೆ ಮಾತ್ರ ಮಾಡಲಾಗಿದೆ. ಜೇನು ತುಪ್ಪಕ್ಕಾಗಿ ಸ್ಥಳೀಯ ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳುವುದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಜೇನು ಕೃಷಿ ಚೆನ್ನಾಗಿ ಆಗಬೇಕು. ಜೇನು ಉತ್ಪನ್ನದಿಂದ ಬೇರೆ ಬೇರೆ ಉತ್ಪನ್ನಗಳನ್ನು ಮಿಷನ್‌ಅಡಿಯಲ್ಲಿ ಸೇರಿಸಬೇಕು ಜೇನುತುಪ್ಪದಿಂದ ಬೈಪ್ರೊಡಕ್ಟ್ ಮಾಡುವ ಬಗ್ಗೆ ಇಂಟಿಗ್ರೇಟೆಟ್ ಪ್ರಜೆಂಟೆಷನ್ ಮಾಡುವುದು. ಜೇನು ಕೃಷಿಗೆ ಇಡೀ ಜಿಲ್ಲೆಯನ್ನು ಸೇರಿಸಿಕೊಳ್ಳಬೇಕು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯೊಂದಿಗೆ ಚರ್ಚಿಸುವಂತೆ ಸೂಚಿಸಿದರು. ಈಗಾಗಲೇ ಜಿಲ್ಲೆಯಲ್ಲಿ 22 ಟನ್‌ಗಳಷ್ಟು ನೈಸರ್ಗಿಕ ಜೇನು ತುಪ್ಪ ಉತ್ಪಾದಿಸಲಾಗುತ್ತಿದೆ. ನಮ್ಮ ದೇಶದ ಜೇನು ತುಪ್ಪದಲ್ಲಿ ಕಲಬೆರೆಕೆ ಇರುವುದರಿಂದ ಜನರಿಗೆ ವಿಶ್ವಾಸ ಇಲ್ಲ. ಜೇನು ತುಪ್ಪದ ಶುದ್ಧತೆ ಬಗ್ಗೆ ಟೆಸ್ಟಿಂಗ್ ಆಗಬೇಕು. ಇದನ್ನು ಸರಕಾರ ಮಟ್ಟದಿಂದ ಮಾಡಬೇಕು. ತೋಟಗಾರಿಕೆ ಯುನಿವರಸಿಟಿ, ಬಿಳಗಿ ಸೆಂಟರ್‌ನಿಂದ ಅಥವಾ ಕೆ.ವಿಕೆ ಮೂಲಕ ತುಂಬಾ ಸ್ಟ್ರೀಕ್ಟ್ ಆಗಿ ಗುಣಮಟ್ಟ ಹಾಗೂ ಶುದ್ಧತೆ ಬಗ್ಗೆ ಟೆಸ್ಟಿಂಗ್ ಮಾಡಿಡಬೇಕು ಇದರ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಚರ್ಚಿಸಿ ಜಿಲ್ಲೆಯಲ್ಲಿ ಟೆಸ್ಟಿಂಗ್ ಕೇಂದ್ರ ಇರುವಂತೆ ನೋಡಿಕೊಳ್ಳಲು ಸೂಚಿಸಿ, ಟೆಸ್ಟಿಂಗ್ ಅದ ನಂತರವೇ ಜೇನುತುಪ್ಪವನ್ನು ಅದನ್ನು ಮಾರುಕಟ್ಟೆಗೆ ಕಳುಹಿಸಬೇಕು ಎಂದು ಸಲಹೆ ನೀಡಿದರು. ಮುಂದುವರೆದು ಹಿಂದಿನ ಸಭೆಯಲ್ಲಿ **Local Brand Devolopment**

ಮಾಡಲು ತಿಳಿಸಲಾಗಿತ್ತು ಇದರಲ್ಲಿ ಗೋಕರ್ಣದ ಬೆಳೆಗಳು ಮತ್ತು ಜಿಲ್ಲೆಯಲ್ಲಿ ಬೆಳೆಯುವ ಬೆಳೆಗಳನ್ನು ಪರಿಗಣಿಸಲು ಸಭೆ ಮಾಡಿ ಪ್ರಯೋಗಾಲಯ ಮಾಡಲು ಯುನಿವರಸಿಟಿಗೆ ಕೊಡುವುದು, ತೋಟಗಾರಿಕೆ ಯುನಿವರ್‌ಸಿಟಿ, ಫೋರೆಸ್ಟ್ ಕಾಲೇಜ್ ಅಥವಾ ಕೆವಿಕೆ ಅದರ ಅಡಿಯಲ್ಲಿ ಬೆಳೆಗಳನ್ನು ಜೋಡಿಸಿ ಗುಣಮಟ್ಟ ಪರೀಕ್ಷೆ ಮಾಡಲು ಪ್ರಯೋಗಾಲಯ ಮಾಡಲು ಸೂಚಿಸಿದರು.

(ಕ್ರಮ: ತೋಟಗಾರಿಕೆ ಇಲಾಖೆ)

11) ನರೇಗಾ:

ಪ್ರಗತಿಯನ್ನು ಪರಿಶೀಲಿಸಿದ ಸಂಸದರು 2008-09 ರಿಂದ ಇಲ್ಲಿಯವರೆಗೆ **Job card** ವಿತರಣೆಯಲ್ಲಿ ಆಗಿರುವ ವ್ಯತ್ಯಾಸದ ಬಗ್ಗೆ ವಿಚಾರಿಸಿದರು. **Job card** ವಿತರಣೆ ವರ್ಷದಿಂದ ವರ್ಷ ಹೆಚ್ಚಾಗುತ್ತಿರುವುದಾಗಿ ತಿಳಿಸಿದರು. ಹಾಗೂ **Wage payment** ಯಡಿ ಇದುವರೆಗೂ ಅನುದಾನ ಬಿಡುಗಡೆಯಾಗಿರುವುದಿಲ್ಲ ಎಂಬ ವಿಷಯವನ್ನು ಉಪಕಾರ್ಯದರ್ಶಿ(ಅಭಿವೃದ್ಧಿ), ಜಿ.ಪಂ.ರವರು ತಿಳಿಸಿದರು.

12) ಎನ್.ಆರ್.ಎಲ್.ಎಂ.:

ಸದರಿ ಯೋಜನೆಯಡಿ ಮಿಷನ್ 55 ಯೋಜನೆಯನ್ನು ಅನುಷ್ಠಾನ ಮಾಡಿರುವ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಸದರ ಗಮನಕ್ಕೆ ತಂದು ಇದರ ಬಗ್ಗೆ ವಿವರಣೆ ನೀಡಿದರು.

13) ಕೃಷಿ:

ಪ್ರಧಾನ ಮಂತ್ರಿ ಕೃಷಿ ಸಿಚಾ ಯೋಜನೆ ಪ್ರಧಾನ ಮಂತ್ರಿಗಳು ಹೆಚ್ಚಿನ ಆದ್ಯತೆ ಕೊಡುತ್ತಿದ್ದು, ಸದರಿ ಯೋಜನೆ ಪ್ರಗತಿ ಪರಿಶೀಲಿಸಲು ಸಭೆ ನಡೆಸಲು ರಾಜ್ಯ ಕೃಷಿ ಮಂತ್ರಿಗಳಿಗೆ ಕೇಳಿಕೊಳ್ಳಲಾಗಿದ್ದು. ಆರ್ಥಿಕ ಪ್ರಗತಿ ಪರಿಶೀಲನೆ ಜೊತೆ ಪೀಲ್ಡ್ ವಿಜಿಟ್ ಮಾಡಲು ಮಂತ್ರಿಗಳೊಂದಿಗೆ ತಾವು ಬರುತ್ತಿರುವುದಾಗಿ ಮಾನ್ಯ ಸಂಸದರು ತಿಳಿಸಿದರು.

ವಿಶೇಷ ಬೆಳಗೆಗಳ ಬಗ್ಗೆ ಸಂಸದರು ವಿಚಾರಿಸಿದರು. ಆತ್ಮ ಯೋಜನೆಯಡಿ ಜಿಲ್ಲೆಯಲ್ಲಿ ಟೆಫ್ ಬೆಳೆಯನ್ನು ಬೆಳೆಯುತ್ತಿದ್ದು, ಈವರ್ಷ 25 ಎಕರೆ ಜಮೀನಿನಲ್ಲಿ ಬೆಳೆಯುತ್ತಿದ್ದು, ಅದನ್ನು ಕ್ಲಿನಿಂಗ್ ಮಾಡಲು ಯಂತ್ರದ ಅವಶ್ಯಕತೆ ಇರುವುದಾಗಿ ಅಧಿಕಾರಿಗಳು ತಿಳಿಸಿದರು. ಸದರಿ ಯಂತ್ರವನ್ನು ನಾಗಪೂರ್ ಸೆಂಟರ್ ನವರು ತಯಾರಿಸುತ್ತಿದ್ದು, ತಯಾರಾದ ನಂತರ ತರಿಸಿಕೊಡುವುದಾಗಿ ಸಂಸದರು ತಿಳಿಸಿ, ಟೆಫ್ ಇದು ಇಥಿಯೋಪಿಯಾದ ಬೆಳೆಯಾಗಿದ್ದು, ಮುಂಡಗೋಡ ಮತ್ತು ಹಳಿಯಾಳದಲ್ಲಿ ಬೆಳಯಲಾಗುತ್ತಿದೆ. ಇದರಲ್ಲಿ ಶೇ. 8 ರಷ್ಟು ಕಬ್ಬಿಣದ ಅಂಶ ಇದ್ದು, ಶೇ. 11.8 ರಷ್ಟು ಜೀರ್ಣವಾಗುವ ನಾರಿನ ಅಂಶವಿದೆ. ಇದರಿಂದ ಕ್ರೀಡಾಪಟುಗಳಿಗೆ ಹಾಗೂ ಸೈನಿಕರಿಗೆ ಅನುಕೂಲವಾಗಲಿದೆ ಎಂದರು. ಹಾಗೂ ಈ ಬೆಳೆಯಿಂದ ಭಾರತೀಯ ಖಾದ್ಯಗಳಿಗೆ ಬಳಸುವ ವಿಧಾನ ಹಾಗೂ ಪದಾರ್ಥಗಳನ್ನು ಪರಿಚಿಸಿದ್ದು, ಮುಂದಿನ ದಿನಗಳಲ್ಲಿ ಟೆಫ್ ಖಾದ್ಯಗಳು ಪಂಚತಾರ ಹೊಟೇಲ್‌ಗಳಲ್ಲಿ ಸಿಗಲಿವೆ ಎಂದರು. ಟೆಫ್ ಬೆಳೆಯ ಮೇಳ ಮಾಡಿ ಎಲ್ಲಾ ಅಧಿಕಾರಿಗಳನ್ನು ಕರೆಯುವುದಾಗಿ ಅವರು ತಿಳಿಸಿದರು.

14) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:

ಮಾತ್ರ ಪೂರ್ಣ ಯೋಜನೆ ಜಿಲ್ಲೆಯ ಹೇಗೆ ನಡೆಯುತ್ತದೆ ಎಂಬ ಬಗ್ಗೆ ವಿಚಾರಿಸಿದರು. ಹಿಂದಿನ ಸಭೆಯಲ್ಲಿ ಫಲಾನುಭವಿಗಳಿಗೆ ಹಣ ಕೊಡುವ ಮತ್ತು ಬೇಯಿಸಿದ ಆಹಾರ ಮನೆಗೆ ಕೊಡುವ ಎರಡು ವಿಚಾರಗಳನ್ನು ಸರಕಾರ ಒಪ್ಪದಿರುವ ಬಗ್ಗೆ ತಿಳಿಸಿ, ಜನರು ಮೊದಲಿದ್ದ ಪದ್ದತಿಯಲ್ಲಿ ಆಹಾರಧಾನ್ಯಗಳ್ನು ಮನೆಗೆ ಕೊಡುವಂತೆ ಕೇಳುತ್ತಿರುವುದಾಗಿ ಅಧಿಕಾರಿಗಳು ವಿವರಿಸಿದರು.

15) ಆರೋಗ್ಯ ಇಲಾಖೆ:

ಇಲಾಖೆಯ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಮಾಡಿ, 2–3 ಯೋಜನೆಗಳಲ್ಲಿ ಮಾತ್ರ ಪ್ರಗತಿ ಸಾಧಿಸಿದ್ದು, ಉಳಿದ ಯೋಜನೆಗಳಲ್ಲಿ ಪ್ರಗತಿ ಕಂಠಿತವಾಗಿರುವುದಾಗಿ ತಿಳಿಸಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಚಿಸಲಾಯಿತು.

ಬಾಲ್ಯ ಸ್ವಸ್ತ್ಯಾ ಯೋಜನೆಯಡಿ ಎಷ್ಟು ಪ್ರಕರಣಗಳು ಬರುತ್ತವೆ. ಅಂದಾಜು ವೆಚ್ಚದ ಬಗ್ಗೆ ಮಾಹಿತಿ ಒದಗಿಸಲು ಸೂಚಿಸಿದರು.

ತಂಬಾಕು ಮಾರಾಟ ನಿಷೇದದ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಹಾಗೂ ಎಷ್ಟು ಪ್ರಕರಣಗಳು ದಾಖಲು ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿ ಒದಗಿಸಲು ಸೂಚಿಸಿದರು.

ಇಲಾಖೆ ಯೋಜನೆಗಳ ಬಗ್ಗೆ ಶಾಸಕರು ಹಾಗೂ ಜಿಲ್ಲಾ ಪಂಚಾಯತ ಸದಸ್ಯರುಗಳಿಗೆ ಮಾಹಿತಿ ಇಲ್ಲ ಆದ್ದರಿಂದ ಎಲ್ಲ ಯೋಜನೆಗಳನ್ನು ಕನ್ನಡದಲ್ಲಿ ನೋಟ್ ಮಾಡಿ ಯೋಜನೆಗಳ ಬಗ್ಗೆ ಮತ್ತು ತಾಲೂಕಿನಲ್ಲಿ ಈ ಕಾರ್ಯಕ್ರಮಗಳು ಹೇಗೆ ಅನುಷ್ಟಾನ ಗೊಳ್ಳುತ್ತಿದೆ ಎಂಬ ಬಗ್ಗೆ ಮಾಹಿತಿ ಒದಗಿಸಲು ತಿಳಿಸಿದರು. ಹಾಗೂ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಆಯಾ ಭಾಗದ ಜನಪ್ರತಿನಿಧಿಗಳನ್ನು ಅಹ್ವಾನಿಸುವಂತೆ ಸೂಚಿಸಲಾಯಿತು.

ಜಿಲ್ಲೆಯಲ್ಲಿ ಕಾಣಿಸಿಕೊಳ್ಳುವ ವಿವಿಧ ರೋಗಗಳ ಬಗ್ಗೆ ಸಂಬಂಧಪಟ್ಟ ಗ್ರಾಮ ಪಂಚಾಯತಗಳಿಗೆ ಮಳೆಗಾಲ ಮುಂಚಿತವಾಗಿ ಮುನ್ನೆಚ್ಚರಿಗೆ ಕ್ರಮ ಕೈಗೊಳ್ಳಲು ಸುತ್ತೋಲೆ ಹೊರಡಿಸಲು ಸೂಚಿಸಲಾಯಿತು.

(ಕ್ರಮ: ಆರೋಗ್ಯ ಇಲಾಖೆ)

16) ಕೈಗಾರಿಕೆ:

ಹಿಂದಿನ ಸಭೆಯಲ್ಲಿ ತಿಳಿಸಿದಂತೆ ಮೆಕ್ಕೆ ಜೋಳ ಬಿಡಿಸುವ ಯಂತ್ರವನ್ನು ತಯಾರಿಸಿ ಕಚೇರಿಯಲ್ಲಿ ಇಟ್ಟಿರುವುದಾಗಿ ಅಧಿಕಾರಿಗಳು ತಿಳಿಸಿದರು. ಈ ಯಂತ್ರ ಸಣ್ಣ ರೈತರಿಗೆ ತುಂಬಾ ಸಹಾಯವಾಗುತ್ತದೆ. ಇಂತಹ 4–5 ಯಂತ್ರಗಳನ್ನು ತಯಾರಿಸಿಟ್ಟುಕೊಳ್ಳಲು ತಿಳಿಸಿ, ಪ್ರೊಡುಸರ್ ಕಂಪನಿ ಮತ್ತು ರೈತ ಸಂಘದ ಸದಸ್ಯರ ಸಭೆ ಕರೆದು ಅಲ್ಲಿ ಸದರಿ ಯಂತ್ರದ ಡೆಮೊ ಮಾಡುವಂತೆ ಸೂಚಿಸಲಾಯಿತು.

ಸಿಂಹ ಶಕ್ತಿ ಒಕ್ಕೂಟ ಕ್ಲಸ್ಟರನ ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಕರಾವಳಿ ಭಾಗದಲ್ಲಿ ಮಾಡಲು ತಿಳಿಸಿದರು.

ಹೊಸದಾಗಿ ಮಶೀನ್‌ಗಳನ್ನು ತಯಾರಿಸಿದ್ದಲ್ಲಿ ಅವುಗಳನ್ನು ಆಪರೇಟ್ ಮಾಡಲು ಪರಿಣಿತರಿದ್ದರೆ ಮಾತ್ರ ಉಪಯೋಗಿಸಲು ಸಾದ್ಯ ಆದ್ದರಿಂದ ಇನ್ನೊಮ್ಮೆ ಮೌಲ್ಯಮಾಪನ ಮಾಡಲು ತಿಳಿಸಿದರು.

ಹಿಂದಿನ ಸಭೆಯಲ್ಲಿ ಕ್ಲಸ್ಟರ್ ಬೇಸ್ಡ್ ಅಪ್ರೋಚ್ ಮಾಡುವ ಬಗ್ಗೆ ವಿಚಾರಿಸಿ, ಗೋಕರ್ಣದ ಮೆಣಸು,ಈರುಳ್ಳಿ, ಬಸಲೆ, ಚವಳಿಕಾಯಿ,ತೊಂಡೆಕಾಯಿ, ತರಕಾರಿಗಳ ಸೇರಿಸಲು ತಿಳಿಸಲಾಗಿತ್ತು. ಅದರಲ್ಲಿ ಜೋಯಿಡಾ, ಕಾರವಾರ ಅಂಕೋಲಾ ಮತ್ತು ಕುಮಟಾ ತಾಲೂಕುಗಳಲ್ಲಿ ಬೆಳೆಯುವ ಬೆಳೆಗಳ ಹಾಗೂ ಗೋಕರ್ಣದ ಬದನೆಕಾಯಿಯನ್ನು ಸೇರಿಸಿ, ಸಿ.ಟಿ.ಸಿ.ಆರ್.ಎಸ್ ರವರೊಂದಿ ಕಾರ್ಯಕ್ರಮ ಮಾಡಲು ತಿಳಿಸಲಾಯಿತು.

ಗೋಕರ್ಣದಲ್ಲಿ ಕೊಲ್ಟ್ ಸ್ಟೋರೇಜ್ ಬೇಕು ಅದಕ್ಕೂ ಮುನ್ನ ಅಲ್ಲಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಬೇಕು. ಸದರಿ ಸ್ಥಳದಲ್ಲಿ ರಾತ್ರಿ 2 ಘಂಟೆಯಿಂದ 3 ಘಂಟೆಯೊಳಗೆ ಮಾತ್ರ ವ್ಯಾಪಾರ ನಡೆಯುತ್ತಿದ್ದು, ಸುಮಾರು 500 ರೈತರು ಬರುತ್ತಾರೆ. ಆದ್ದರಿಂದ ಸದರಿ ಸ್ಥಳದಲ್ಲಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿ, ಅದರಲ್ಲಿ ಕುಡಿಯುವ ನೀರು, ಶೌಚಾಲಯ, ಹರಾಜು ಮಾಡಲು ಸ್ಥಳ ಇತ್ಯಾದಿಗಳ ವ್ಯವಸ್ಥೆ ಮಾಡುವಂತೆ ಸೂಚಿಸಲಾಯಿತು.

ರೆಡಿಮೇಡ್ ಫುಡ್. ಸಿ.ಎಫ್.ಟಿ.ಆರ್. ಮತ್ತು ಡಿ.ಎಫ್.ಆರ್.ಐ ರವರು ಮುಂದೆ ಬಂದಿದ್ದು, ಅವರ ಜೊತೆ ಸೇರಿ ಕ್ಲಸ್ಟರ್ ಬೇಸ್ಡ್ ಅಪ್ರೋಚ್ ಮಾಡುವುದು ಇಲಾಖೆಯಲ್ಲಿ ಪ್ರಾತ್ಯಕ್ಷತೆಯಡಿ ರಾಜ್ಯ ಸರಕಾರದಿಂದ ಹಣ ಬಿಡುಗಡೆಯಾಗುತ್ತಿದೆ ಅದರಿಂದ ಅಥವಾ ಜಿಲ್ಲಾ ಪಂಚಾಯತಿ ಹಣದಿಂದ ಸಿ.ಎಫ್.ಟಿ.ಆರ್, ಡಿ.ಎಫ್.ಆರ್.ಐ. ಮತ್ತು ಬೇರೆ ಸಂಸ್ಥೆಯವರೊಂದಿಗೆ ಮಿಲ್ಲೆಟ್ ಬೆಳೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಆಹಾರ ಧಾನ್ಯಗಳನ್ನು ಬೈ ಮಟೆರಿಯಲ್ ಆಗಿ ತೆಗೆದುಕೊಂಡು ಪ್ರದರ್ಶನ ಕಾರ್ಯಕ್ರಮ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

(ಕ್ರಮ: ಜಿಲ್ಲಾ ಕೈಗಾರಿಕೆ)

17) ಶಿಕ್ಷಣ ಇಲಾಖೆ:

ಸ್ಟೆಮ್ ಯೋಜನೆ ಅಭಿವೃದ್ಧಿ ಆಗಿರುವ ಬಗ್ಗೆ ವರದಿ ಹಾಗೂ ಇಕೊ ಕ್ಲಬ್ ಚಟುವಟಿಕೆ ಮೌಲ್ಯಮಾಪನ ಮಾಡಿದ ಬಗ್ಗೆ ವರದಿ ಸಲ್ಲಿಸಲು ಸೂಚಿಸಿದರು.

(ಕ್ರಮ: ಶಿಕ್ಷಣ ಇಲಾಖೆ)

18) ಅಕ್ಷರ ದಾಹೋಹ:

ಹಿಂದಿನ ಸಭೆಯಲ್ಲಿ ಶಾಲೆಗಳಲ್ಲಿ ಕೊಡುತ್ತಿರುವ ಊಟದ ಬಗ್ಗೆ ಡಾಟಾ ಮೆನೇಜ್‌ಮೆಂಟ್‌ನ್ನು ಹರಿಯಾಣ ಮತ್ತು ದೆಹಲಿ ಮಾದರಿಯಲ್ಲಿ ಮಾಡಲು ತಿಳಿಸಲಾಗಿತ್ತು. ಇದರ ಬಗ್ಗೆ ವಿಚಾರಿಸಲಾಗಿ, ಈಗಾಗಲೇ ಸ್ಟಾಫ್ಟವೇರ್ ಡಿಸೈನ್ ಮಾಡಿರುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದರು. ಮುಂದಿನ ಸಭೆಯಲ್ಲಿ ಹಾಗೂ ಶಿಕ್ಷಣ ಮಂತ್ರಿ ಮತ್ತು ಪಿ.ಡಿ.ಎಸ್. ಮಂತ್ರಿಗಳು ಬಂದಾಗ ಡೆಮೊ ಮಾಡಿ ತೋರಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಯಿತು. ಎಲ್ಲಾ ಶಾಲೆಗಳಲ್ಲಿ ಕೊಡುತ್ತಿರುವ ಊಟ ಮತ್ತು ತಿಂಡಿಯ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ Dash ಬೋರ್ಡ್‌ಗೆ ಬರುವ ವ್ಯವಸ್ಥೆಯಾಗಬೇಕು. ಜಿಲ್ಲಾ ಪಂಚಾಯತದಲ್ಲಿ ರಿಯಲ್ ಟೈಮ್ ಡಾಟಾ ಇರುವಂತೆ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದರು. ಹಾಗೂ ಆಹಾರದ ಗುಣಮಟ್ಟ ಪರೀಕ್ಷಿಸಲು ಡಿ.ಎಫ್.ಅರ್.ಎಲ್ ರವರು ಸಣ್ಣ ಕಿಟ್ ತಯಾಸಿದ್ದು, ಅದನ್ನು ತಂದು ಎಲ್ಲಾ ಶಾಲೆಗಳಿಗೆ ಅಥವಾ ಕ್ಲಷ್ಟರ್‌ಗಳಿಗೆ ಕೊಡುವ ಬಗ್ಗೆ ಕ್ರಮ ವಹಿಸಲು ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಲೋಕಸಭಾ ಸದಸ್ಯರು ಉತ್ತರ ಕನ್ನಡ ಕ್ಷೇತ್ರ–12 ಹಾಗೂ
ಅಧ್ಯಕ್ಷರು ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ
ಮತ್ತು ಉಸ್ತುವಾರಿ(ದಿಶಾ) ಸಮಿತಿ,
ಉತ್ತರ ಕನ್ನಡ,

ಸಂ:ಉ.ಕ./ಜಿಪಂ/(ದಿಶಾ)/ಸಿಆರ್-34/2019-20

ಉ.ಕ. ಜಿಲ್ಲಾ ಪಂಚಾಯತ ಕಾರ್ಯಾಲಯ,
(ಎನ್‌ಆರ್‌ಎಲ್‌ಎಮ್ ಶಾಖೆ)
ಕಾರವಾರ ದಿನಾಂಕ: 18-02-2020.

ಪ್ರತಿ ಗೌರವಪೂರ್ವಕವಾಗಿ ಮಾಹಿತಿಗಾಗಿ.

1. ಮಾನ್ಯ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭಾ, ವಿಧಾನ ಸೌಧ ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಸನ್ಮಾನ್ಯ ಸಭಾಧ್ಯಕ್ಷರ ಆದ್ಯ ಗಮನಕ್ಕೆ ತರಲು ಕೋರಿದೆ.
2. ಶ್ರೀಮತಿ ಶಶಿಕಲಾ ಜೊಲ್ಲೆ, ಮಹಿಳಾ ಮತ್ತು ಮಕ್ಕಳ ಇಲಾಖೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರು, ಕರ್ನಾಟಕ ವಿಧಾನ ಸಭಾ, ವಿಧಾನ ಸೌಧ ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಸನ್ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.
3. ಸನ್ಮಾನ್ಯ ಶ್ರೀ ಅನಂತಕುಮಾರ ಹೆಗಡೆ, ಮಾನ್ಯ ಲೋಕಸಭಾ ಸದಸ್ಯರು, ಉತ್ತರ ಕನ್ನಡ ಕ್ಷೇತ್ರ -12, ಕಾರವಾರ ಇವರ ಆಪ್ತಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಮಾನ್ಯ ಸಂಸದರ ಆದ್ಯ ಗಮನಕ್ಕೆ ತರಲು ಕೋರಿದೆ.
4. ಮಾನ್ಯ ಶ್ರೀ ಆರ್ ವಿ ದೇಶಪಾಂಡೆ, ವಿಧಾನ ಸಭಾ ಸದಸ್ಯರು, ಹಳಿಯಾಳ
5. ಮಾನ್ಯ ಶ್ರೀಮತಿ ರೂಪಾಲಿ ನಾಯ್ಕ,ವಿಧಾನ ಸಭಾ ಸದಸ್ಯರು, ಕಾರವಾರ.
6. ಮಾನ್ಯ ಶ್ರೀ ದಿನಕರ ಶೆಟ್ಟಿ, ವಿಧಾನ ಸಭಾ ಸದಸ್ಯರು, ಕುಮಟಾ
7. ಮಾನ್ಯ ಶ್ರೀ ಸುನಿಲ ನಾಯ್ಕ, ವಿಧಾನ ಸಭಾ ಸದಸ್ಯರು, ಭಟ್ಕಳ.
8. ಮಾನ್ಯ ಶ್ರೀ ಶಿವರಾಮ ಹೆಬ್ಬಾರ, ವಿಧಾನ ಸಭಾ ಸದಸ್ಯರು, ಯಲ್ಲಾಪುರ.
9. ಮಾನ್ಯ ಶ್ರೀ ಎಸ್.ಎಲ್ ಘೋಟ್ನೇಕರ್, ವಿಧಾನ ಪರಿಷತ ಸದಸ್ಯರು, ಹಳಿಯಾಳ.
10. ಮಾನ್ಯ ಶ್ರೀ ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸದಸ್ಯರು, ಹುಬ್ಬಳ್ಳಿ.
11. ಮಾನ್ಯ ಶ್ರೀ ಎಸ್.ವಿ. ಸಂಕನೂರ, ವಿಧಾನ ಪರಿಷತ್ ಸದಸ್ಯರು, ಗದಗ.
12. ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯತ, ಉತ್ತರ ಕನ್ನಡ.
13. ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಕಾರವಾರ.
14. ಜಿಲ್ಲೆಯ ಎಲ್ಲಾ ತಾಲೂಕ ಪಂಚಾಯತ ಅಧ್ಯಕ್ಷರುಗಳು.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ನಡುವಳಿ ಮೇಲೆ ಅನುಪಾಲನಾ ವರದಿ ಸಲ್ಲಿಸಲು ತಿಳಿಸಿ ರವಾನಿಸಿದೆ.

1. ಎಲ್ಲಾ ಶಾಖಾ ಮುಖ್ಯಸ್ಥರು, ಜಿಲ್ಲಾ ಪಂಚಾಯತ ಕಾರವಾರ.
2. ಕಾರ್ಯನಿರ್ವಾಹಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ/ಶಿರಸಿ.
3. ಸಹಾಯಕ ಕಮೀಶನರ್, ಕಾರವಾರ/ಕುಮಟಾ/ಭಟ್ಕಳ/ಶಿರಸಿ.
4. ಜಿಲ್ಲೆಯ ಎಲ್ಲಾ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು.
5. ಸಂಬಂಧ ಪಟ್ಟ ಅನುಷ್ಠಾನಾಧಿಕಾರಿಗಳಿಗೆ.

18/02/2020

ಯೋಜನಾ ನಿರ್ದೇಶಕರು (ಡಿ,ಆರ್,ಡಿ,ಎ)
ಜಿಲ್ಲಾ ಪಂಚಾಯತ ಕಾರವಾರ, ಉ.ಕ